ಪ್ರಜಾವಾಣಿ
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

**Tuesday 26th April 2022, Page No.04**

**KSOU Event Ceremony: Honorary Doctorate RSST Hon. Sec.A.V.S. Murthy**

ಕೆಎಸ್‌ಒಯು ಘಟಿಕೋತ್ಸವ; ಕಲಿಕೆಗೆ ವಯಸ್ಸಿನ ಹಂಗಿಲ್ಲ

# 81ನೇ ವಯಸ್ಸಿನಲ್ಲಿ ಸ್ನಾತಕೋತ್ತರ ಪದವಿ!



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) 17ನೇ ಘಟಿಕೋತ್ಸವದಲ್ಲಿ ಆನಂದ ಸಂಕೇಶ್ವರ, ಎ.ವಿ.ಎಸ್.ಮೂರ್ತಿ ಮತ್ತು ಇ.ಎಸ್.ಚಕ್ರವರ್ತಿ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ 'ಗೌರವ ಡಾಕ್ಟರೇಟ್' ಪ್ರದಾನ ಮಾಡಿದರು. ಕೆಎಸ್‌ಒಯು ಕುಲಸಚಿವ (ಮೌಲ್ಯಮಾಪನ) ಡಾ.ಕೆ.ಬಿ.ಪ್ರವೀಣ, ಕುಲಪತಿ ಡಾ.ಎಸ್.ವಿದ್ಯಾಶಂಕರ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕ (ತಾಂತ್ರಿಕ) ಎ.ಬಿ. ಬಸವರಾಜು, ಕುಲಸಚಿವ ಡಾ.ಆರ್.ರಾಜಣ್ಣ ಇದ್ದಾರೆ

**ಮೈಸೂರು:** ಜ್ಞಾನಾರ್ಜನೆಗೆ ವಯಸ್ಸಿನ ಹಂಗಿಲ್ಲ. ಕಲಿಯುವ ಹಂಬಲವಿದ್ದರೆ, ಯಾವ ವಯಸ್ಸಿನಲ್ಲಾದರೂ ಪದವಿ ಪೂರೈಸಬಹುದು ಎಂಬುದನ್ನು 81 ವರ್ಷದ ಎನ್.ಸಿ.ಶ್ರೀನಿವಾಸ ಮೂರ್ತಿ ಮತ್ತು 75ರ ಇಳಿವಯಸ್ಸಿನ ಎನ್.ಶ್ರೀಧರ ಅವರು ಸೋಮವಾರ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) 17ನೇ ಘಟಿಕೋತ್ಸವದಲ್ಲಿ ಸಾಬೀತು ಮಾಡಿದರು.

ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆದವರ ನಡುವೆ ಈ ಇಬ್ಬರು ಎಲ್ಲರ ಕೇಂದ್ರಬಿಂದುವಾಗಿದ್ದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಂದ ಸ್ನಾತಕೋತ್ತರ ಪದವಿ ಪ್ರಮಾಣಪತ್ರ ಸ್ವೀಕರಿಸಿದಾಗ ಜೋರು ಚಪ್ಪಾಳೆ ಕೇಳಿಬಂತು.

ಶ್ರೀನಿವಾಸಮೂರ್ತಿ, ಕನ್ನಡದಲ್ಲಿ ಶೇ 67 ಅಂಕಗಳೊಂದಿಗೆ ನಗದು ಬಹುಮಾನ ಪಡೆದರು. ಬೆಂಗಳೂರಿನ ಬನಶಂಕರಿ ಎರಡನೇ ಹಂತದ ನಿವಾಸಿಯಾಗಿರುವ ಅವರು 1964 ರಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪೂರೈಸಿದ್ದರು. ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದು, 2000ದಲ್ಲಿ ನಿವೃತ್ತಿ ಹೊಂದಿದ್ದರು.

‘ಪರೀಕ್ಷೆ ಸಮೀಪಿಸಿದಂತೆ ಪ್ರತಿದಿನ 7 ರಿಂದ 8 ಗಂಟೆ ಓದುತ್ತಿದ್ದೆ. ನಿಗದಿತ ಅವಧಿಯಲ್ಲಿ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕಿದ್ದುದರಿಂದ ದಿನಕ್ಕೆ ಎರಡು ಪುಟಗಳಷ್ಟು ಬರೆದು ಅಭ್ಯಾಸ ಮಾಡುತ್ತಿದ್ದೆ’ ಎಂದು ‘ಪ್ರಜಾವಾಣಿ’ ಜತೆ ಸಂತಸ ಹಂಚಿಕೊಂಡರು.

ಮೈಸೂರಿನ ಹೆಬ್ಬಾಳದ ನಿವಾಸಿ ಶ್ರೀಧರ, ಶೇ 72 ಅಂಕಗಳೊಂದಿಗೆ ಸಂಸ್ಕೃತ ಎಂ.ಎ ಪದವಿ ಪಡೆದರು.  ಎಂಜಿನಿಯರ್ ಪದವೀಧರರಾಗಿರುವ ಅವರು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದಲ್ಲಿ ಉದ್ಯೋಗದಲ್ಲಿದ್ದು ನಿವೃತ್ತಿ ಹೊಂದಿದ್ದಾರೆ.

**ಗೌರವ ಡಾಕ್ಟರೇಟ್ ಪ್ರದಾನ:** ಬೆಂಗಳೂರಿನ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್, ಆರ್.ವಿ.ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಎ.ವಿ.ಎಸ್.ಮೂರ್ತಿ, ಟಿಸಿಎಸ್ ಉಪಾಧ್ಯಕ್ಷ ಇ.ಎಸ್.ಚಕ್ರವರ್ತಿ ಹಾಗೂ ವಿಆರ್‌ಎಲ್ ಸಮೂಹ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.